ಮೂಲ ದಾವಾ ಃ 67-2016 ಪಿಡಬ್ಲ್ಯುಃ1

ಸಾಕ್ಷಿಯನ್ನು ದಿನಾಂಕಃ 23.08.2019 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

ಪಾಟಿ ಸವಾಲು ಃ ಪ್ರತಿವಾದಿ ಪರ ಶ್ರೀ ಬಿ ವಿ ಪಿ ವಕೀಲರಿಂದ

ದಿಃ 20.11.2017 ರಂದು ನನ್ನ ಮದುವೆಯನ್ನು ಉಪನೊಂದಾಣಾಧಿಕಾರಿಗಳ ಕಚೇರಿಯಲ್ಲಿ ಮಂಜುನಾಥ ಪಾಟೀಲ್‌ನೊಂದಿಗೆ ನೊಂದಣಿ ಮಾಡಿಕೊಂಡಿದ್ದೇನೆ ಅಂದರೆ ಸರಿ. ನಾನು ದಾವೆಯಲ್ಲಿ ಮದುವೆಯೊದ ನಂತರ ಹೆಸರನ್ನು ಬದಲಾಯಿಸಿಕೊಂಡಿಲ್ಲ ಅಂದರೆ ನನಗೆ ಅಷ್ಟು ತಿಳುವಳಿಕೆ ಇರಲಿಲ್ಲ.

ನ್ಯಾಯೊಲಯದ ಪ್ರಶ್ನೆಃ- ಮದುವೆಯೊಗುವ ಪೂರ್ವದಲ್ಲಿ ನಿನ್ನ ಹೆಸರು ಏನು ಇತ್ತು?
ಸಾಕ್ಷಿಯ ಉತ್ತರಃ ನಾಗರತ್ನ ತಂದೆ ಶ್ರೀಕಾಂತ್ ಮಿರಾಶೆ ಅಂತ ಇತ್ತು.

ನ್ಯಾಯೊಲಯದ ಪ್ರಶ್ನೆಃ- ನಂತರ ಯೊರ ಜೊತೆ ಮದುವೆಯೊಯಿತು.
ಸಾಕ್ಷಿಯ ಉತ್ತರಃ ಅಂದಾಜು 04.04.2010 ರಂದು ಮಂಜುನಾಥಗೌಡ ತಂದೆ ಅಮೃತಗೌಡ ಪಾಟಿಲ್‌ರವರೊಂದಿಗೆ ಮದುವೆ ಆಗಿತ್ತು. ನನ್ನ ಗಂಡನು 14.08.2011 ರಂದು ಮೃತ ಹೊಂದಿರುತ್ತಾನೆ. ಸಾಕ್ಷಿಯು ಮುಂದುವರೆದು ದಿಃ 13.08.2011 ರಂದು ಗೌತಮ ಮಂಜುನಾಥ ಪಾಟೀಲ್ ಎನ್ನುವ ಮಗ ನನಗೆ ಜನಿಸಿರುತ್ತದೆ.

ನ್ಯಾಯೊಲಯದ ಪ್ರಶ್ನೆಃ- ನಿನ್ನ 2ನೇ ಮದುವೆ ಯೊವಾಗ ಆಗಿದೆ?
ಸಾಕ್ಷಿಯ ಉತ್ತರಃ ದಿಃ 15.11.2017 ರಂದು ನನ್ನ 2ನೇ ಮದುವೆಯು ಪರಶುರಾಮ ತಂದೆ ಅಮೃತ ಸೋಮಪುರ್‌ಕರ್ ರವರೊಂದಿಗೆ ಆಗಿರುತ್ತದೆ.

ನನ್ನ ವಾದ ಪತ್ರದಲ್ಲಿ ನನ್ನ ಗಂಡನ ಹೆಸರನ್ನು ಯೊಕೆ ಬದಲಾಯಿಸಿಲ್ಲ ಅಂದರೆ ನನಗೆ

ಗೊತ್ತಿರಲಿಲ್ಲ, ಈಗ ಬದಲಾಯಿಸಿಕೊಳ್ಳುತ್ತೇನೆ.

ನಮ್ಮ ಮೊದಲನೆ ಗಂಡನ ಮನೆತನದ ಹಿರೇತನವನ್ನು ಮಂಜುನಾಥಗೌಡ ತಂದೆ ಅಮೃತಗೌಡ ಪಾಟೀಲ್‌ರವರು ಮಾಡುತ್ತಿದ್ದನು ಅಂದರೆ ಸಾಕ್ಷಿಯು ಎಲ್ಲರೂ ಸೇರಿ ಮಾಡುತ್ತಿದ್ದರು. ಗುರುನಾಥಗೌಡ್ ತಂದೆ ಅಮೃತಗೌಡ ಪಾಟಿಲ್‌ರವರು ನನ್ನ ಗಂಡನ ಅಣ್ಣನಾಗಬೇಕು ಅಂದರೆ ಸರಿ. 4ನೇ ಪ್ರತಿವಾದಿಯೊಂದಿಗೆ ಗುರುನಾಥಗೌಡ ರವರು ಕೂಡು ಕುಟುಂಬದ ಆಸ್ತಿಯಲ್ಲಿ 1 ಎಕರೆ ಜಮೀನನ್ನು ಮಾರಾಟ ಮಾಡುವುದಾಗಿ ಒಪ್ಪಂದ ಮಾಡಿಕೊಂಡಿದ್ದರು ಅಂದರೆ ಸರಿಯಲ್ಲ, ಸದರಿ ಒಪ್ಪಂದಕ್ಕೆ ನನ್ನ ಮೊದಲನೇ ಗಂಡನು ಸಹಿ ಮಾಡಿದ್ದಾನೆ ಅಂದರೆ ಸರಿಯಲ್ಲ, ನನ್ನ 1ನೇ ಗಂಡನು ಮೃತನಾದ ನಂತರ ಒಪ್ಪಂದದ ಪ್ರಕಾರ ಗುರುನಾಥಗೌಡ ಈತನು ನೊಂದಾಯಿತ ಖರೀದಿ ಪತ್ರದ ಮೂಲಕ 1 ಎಕರೆ ಜಮೀನನ್ನು ಮಾರಾಟ ಮಾಡಿದ್ದಾರೆ ಅಂದರೆ ಗುರುನಾಥಗೌಡ ಮಾತ್ರ ತಮ್ಮ ಒಬ್ಬರ ಹಕ್ಕಿಗೆ ಮಾರಾಟ ಮಾಡಿದ್ದಾರೆ. ನನ್ನ ಗಂಡನು ಒಪ್ಪಂದಕ್ಕೆ ಸಹಿ ಹಾಕಿದ್ದು ನನಗೆ ಗೊತ್ತಿಲ್ಲ ಇವತ್ತೇ ನನಗೆ ನ್ಯಾಯಾಲಯದ ಮುಂದೆ ತಿಳಿದು ಬಂದಿರುತ್ತದೆ.

ಮುಂದುವರೆದ ಪಾಟಿ ಸವಾಲಿಗೆ ಸಮಯ ಕೇಳಲಾಗಿ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಅದೆ,

ಸಹಿ/-

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಕಲಘಟಗಿ.